**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\4122\2014\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 22.11.2016

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ಕುಣಿಗಲ್ ತಾಲ್ಲೂಕು ಕೊತ್ತಗೆರೆ ಗ್ರಾಮ ಪಂಚಾಯ್ತಿಯಲ್ಲಿ 2013-14ನೇ ಸಾಲಿನ ಕಾಮಗಾರಿಗಳಲ್ಲಿ ಎದುರುದಾರ ನಂ: 2, 3 ಮತ್ತು 5 ರವರು ಹಣ ದುರುಪಯೋಗ ಪಡಿಸಿಕೊಂಡಿದ್ದು ಅವರಿಂದ ಉಪ ಪ್ಯಾರ ನಂ:ಋ ಮತ್ತು ಎ., ದಲ್ಲಿ ನಮೂದಿಸಿದಂತೆ ಹಣ ವಸೂಲಿ ಮಾಡಿಕೊಂಡು ಸರ್ಕಾರಕ್ಕೆ ಜಮಾ ಮಾಡಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವ ಕುರಿತು.

*******

ಶ್ರೀ.ಹೆಚ್.ಬಿ.ಶಂಕರಲಿಂಗೇಗೌಡ, ಬಿನ್ ಲೇಟ್ ಬೋರಲಿಂಗಯ್ಯ ಕೆ. ಹೊಸಹಳ್ಳಿ ಗ್ರಾಮ ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಎಂ.ಆಂಜನಪ್ಪ ಕಾರ್ಯನಿರ್ವಾಹಕ ಅಧಿಕಾರಿ, ಕುಣಿಗಲ್ ತಾಲ್ಲೂಕು ಪಂಚಾಯ್ತಿ, ಕುಣಿಗಲ್ ತಾಲ್ಲೂಕು, ತುಮಕೂರು (2) ಶ್ರೀ.ಚಂದ್ರೇಗೌಡ, ಅಧ್ಯಕ್ಷರು, ಗ್ರಾಮ ಪಂಚಾಯ್ತಿ ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (3) ಶ್ರೀ.ಕೆ.ಈಶ್ವರ್ ಪ್ರಸಾದ್, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಕೊತ್ತಗೆರೆ ಗ್ರಾಮ ಪಂಚಾಯ್ತಿ ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (4)ಶ್ರೀಮತಿ.ಶೈಲಜಾ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯ್ತಿ ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು (5) ಶ್ರೀಮತಿ.ನಾಗರತ್ನ ಕಂಪ್ಯೂಟರ್ ಆಪರೇಟರ್, ಗ್ರಾಮ ಪಂಚಾಯ್ತಿ ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ

ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. <u>ದೂರಿನ ಸಂಕ್ಷಿಪ್ತ ವಿವರಣೆ:-</u>

ದೂರುದಾರರು ತಮ್ಮ ದೂರಿನಲ್ಲಿ ಕುಣಿಗಲ್ ತಾಲ್ಲೂಕು ಕೊತ್ತಗೆರೆ ಗ್ರಾಮ ಪಂಚಾಯ್ತಿಯಿಂದ (1) ಕಾಮಗಾರಿ ಸಂಕೇತ ಆರ್.ಸಿ./992248711660 (2) ಕಾಮಗಾರಿ ಸಂಕೇತ ಆರ್.ಸಿ./992248711662 ಇವುಗಳ ಕಾಮಗಾರಿಗಳನ್ನು ಎದುರುದಾರರು ಮಾಡದೆ ನಕಲಿ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡು, ಅಧಿಕಾರ ದುರುಪಯೋಗ ಪಡಿಸಿಕೊಂಡು, ಕಾನೂನು ಉಲ್ಲಂಘನೆ ಮಾಡಿ ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದಾರೆ. ಈ ಬಗ್ಗೆ ದೂರುದಾರರು ಸಲ್ಲಿಸಿದ ದೂರನ್ನು ಓಂಬಡ್ಸಮನ್‌ಗೆ ವರ್ಗಾಹಿಸಿದ್ದು ಅದರಲ್ಲಿ ಕಾಮಗಾರಿಗಳು ಅಕ್ರಮವಾಗಿರುವುದು ದೃಢಪಟ್ಟಿರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಅವರಿಂದ ದುರುಪಯೋಗ ಪಡಿಸಿಕೊಂಡ ಹಣವನ್ನು ವಸೂಲಿ ಮಾಡಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ದೂರು ಸಲ್ಲಿಸಿದ್ದಾರೆ.

3) ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ಈ ಅಕ್ರಮ ನಡೆದ ವೇಳೆಯಲ್ಲಿ ತಾನು ಕೆಲಸ ನಿರ್ವಹಿಸುತ್ತಿರಲಿಲ್ಲ ಆ ಅವಧಿಯಲ್ಲಿ ಶ್ರೀ.ಶಂಕರಪ್ಪ ಎನ್ನುವವರು ಇ.ಓ., ಆಗಿ ಕೆಲಸ ನಿರ್ವಹಿಸಿ ನಂತರ ಅವರು ಕರ್ತವ್ಯದಲ್ಲಿದ್ದಾಗಲೇ ಮರಣ ಹೊಂದಿರುತ್ತಾರೆ. ಜಿಲ್ಲಾ ಪಂಚಾಯ್ತಿ ತುಮಕೂರು ರವರ ಆದೇಶದಂತೆ ದಿ: 16.10.2014 ರಂದು ಓಂಬಡ್ಸಮನ್ ಜೊತೆ ಕುಣಿಗಲ್ ತಾಲ್ಲೂಕಿನ ಕೊತ್ತಗೆರೆ ಗ್ರಾಮ ಪಂಚಯ್ತಿ ಕಛೇರಿಯಲ್ಲಿ 2013-14ನೇ ಸಾಲಿನಲ್ಲಿ ನಿರ್ವಹಿಸಿರುವ ಕಾಮಗಾರಿಗಳ ಕಡತಗಳನ್ನು ಪರಿಶೀಲಿಸಲಾಯಿತು. ನರೇಗ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಂಪೂರ್ಣ ಜವಾಬ್ದಾರಿ ಎದುರುದಾರ ನಂ:3 ರವರದ್ದಾಗಿರುತ್ತದೆ. ಇದರಲ್ಲಿ ತನ್ನ ಯಾವುದೇ ಪಾತ್ರ ಇರುವುದಿಲ್ಲ ಆದ್ದರಿಂದ ಸದರಿ ದೂರಿನಲ್ಲಿ ತನನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

4) ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಯಲ್ಲಿ ನರೇಗ ಯೋಜನೆಯ ಅನುಷ್ಠಾನಗೊಳಿಸುವುದು ಎದುರುದಾರ ನಂ:3 ರವರ ಕರ್ತವ್ಯವಾಗಿರುತ್ತದೆ. ಇದರಲ್ಲಿ ತನಗೆ ಯಾವುದೇ ಅಧಿಕಾರ ಇರುವುದಿಲ್ಲ. ಆದರೆ ಕಾನೂನು ಪ್ರಕಾರ ಹಣ ಬಿಡುಗಡೆ ಮಾಡಿದ್ದು, ಎಲ್ಲಾ ಕಾಮಗಾರಿಗಳು ಸಮರ್ಪಕವಾಗಿ ನಡೆದಿರುತ್ತದೆ. ಆದ್ದರಿಂದ ಸದರಿ ಪ್ರಕರಣದಿಂದ ತನನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

5) ಎದುರುದಾರ ನಂ:3 ರವರು ತಮ್ಮ ಆಕ್ಷೇಪಣೆಯಲ್ಲಿ ಪಂಚಾಯ್ತಿ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಕಿರಿಯ ಇಂಜಿನಿಯರ್ ರವರು ಫಲಾನುಭವಿಗಳ ಹಾಜರಾತಿಗಳನ್ನು ಪಡೆದು ಕೆಲಸ ಮಾಡಿಸುವುದು ಇವರ ಕರ್ತವ್ಯವಾಗಿರುತ್ತದೆ. 7 ದಿನಗಳ ಕೂಲಿ ಕೆಲಸ ನಂತರ ಎಂ.ಬಿ. ಪುಸ್ತಕದಲ್ಲಿ ದಾಖಲಿಸಬೇಕಾಗುತ್ತದೆ. ಆ ನಂತರ ಕಂಪ್ಯೂಟರ್ ನಲ್ಲಿ ದಾಖಲಿಸಿ ತನ್ನ, ಅಧ್ಯಕ್ಷರ ಎಫ್.ಟಿ.ಒ., ಪಾಸ್ ಮಾಡಿದ ನಂತರ ಅಧ್ಯಕ್ಷರು ತಮ್ಮ ಡ್ಯಾಂಗಲ್ ಅನ್ನು ಕಂಪ್ಯೂಟರ್‌ಗೆ ಹಾಕಿ ಪಾವತಿ ಆದೇಶ ಮಾಡಿದರೆ ಮಾತ್ರ ಫಲಾನುಭವಿಗಳ ಖಾತೆಗೆ ಹಣ ಪಾವತಿಯಾಗುವುದು. ಓಂಬಡ್ಸಮನ್ ರವರ ವಿಚಾರಣಾ ಅವಧಿಯಲ್ಲಿ ದಿ: 25.3.2014ರಂದು ಆಗಿನ ಕೊತ್ತಗೆರೆ ಗ್ರಾಮ ಪಂಚಾಯ್ತಿ ಕಛೇರಿಯಲ್ಲಿ ಈ ಎಲ್ಲಾ ಮಾಹಿತಿ ನೀಡದೆ ಪಿ.ಡಿ.ಓ., ರವರು ಮರೆ ಮಾಚಿ ವಂಚಿಸಿದ್ದಾರೆ. ಆದರೆ ಹಣ ಕಾಸಿನ ಸ್ಟೇಟ್ ಮೆಂಟ್ ನೋಡಿದರೆ ಇದು ಸ್ಪಷ್ಟವಾಗುತ್ತದೆ. ಆದ್ದರಿಂದ ಇದರಲ್ಲಿ ತಾನು ಯಾವುದೇ ಹಣದ ದುರುಪಯೋಗ ಮಾಡಿರುವುದಿಲ್ಲ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

6) ಎದುರುದಾರ ನಂ:4 ಮತ್ತು 5 ರವರು ತಮ್ಮ ಆಕ್ಷೇಪಣೆಯಲ್ಲಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

7) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿ ಎದುರುದಾರರು ಅಕ್ರಮ ಕಾಮಗಾರಿ ಮಾಡಿ ಲಕ್ಷಾಂತರ ರೂಗಳನ್ನು ಸರ್ಕಾರಕ್ಕೆ ವಂಚಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಸಮಗ್ರ ತನಿಖೆ ಮಾಡಿ ಕೇಳಿಕೊಂಡಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) "ಕೊತ್ತಗೆರೆ ಗ್ರಾಮ ಪಂಚಾಯ್ತಿಯಿಂದ 2014-15ನೇ ಸಾಲಿನಲ್ಲಿ ದೂರುದಾರರು ಹೆಸರಿಸಿರುವ ಕಾಮಗಾರಿಗಳು ನಡೆದಿರುವುದಿಲ್ಲವೆಂದು ಎದುರುದಾರರು ಅಲ್ಲಗಳೆದಿರುವುದಿಲ್ಲ. ಆದರೆ ಎದುರುದಾರ ನಂ: 1 ರಿಂದ 3 ರವರು ನಡೆದಿರುವ ಅಕ್ರಮ ಕಾಮಗಾರಿಗಳನ್ನು ಒಬ್ಬರಮೇಲೊಬ್ಬರು ಆಪಾದಿಸುತ್ತಾ ಆಕ್ಷೇಪಣೆ ಸಲ್ಲಿಸಿದ್ದಾರೆ ಅಂತ ಕಂಡುಬರುತ್ತದೆ.

ಆ) ದೂರುದಾರರು ಜಿಲ್ಲಾ ಪಂಚಾಯ್ತಿ ತುಮಕೂರು ರವರಿಗೆ ದೂರು ನೀಡಿದ ನಂತರ ಈ ಕಾಮಗಾರಿಗಳ ಸಮಗ್ರ ತನಿಖೆಗಾಗಿ ಓಂಬಡ್ಸಮನ್ ರವರನ್ನು ನೇಮಿಸಿದ್ದು ಅವರು ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ, ಎದುರುದಾರರ ಹೇಳಿಕೆಗಳನ್ನು ದಾಖಲಿಸಿಕೊಂಡು, ಸಂಬಂಧಿಸಿದ ಎಲ್ಲಾ ಕಡತಗಳನ್ನು ಪರಿಶೀಲಿಸಿ ದಿ: 21.10.2014ರಂದು ತಮ್ಮ ವರದಿ ಸಲ್ಲಿಸಿರುತ್ತಾರೆ. ಆ ವರದಿಯಲ್ಲಿ ಎದುರುದಾರರು ಕೈಗೊಂಡ ಕಾಮಗಾರಿ (1) ಕಾಮಗಾರಿ ಸಂಕೇತ ಆರ್.ಸಿ./992248711660 (2) ಕಾಮಗಾರಿ ಸಂಕೇತ ಆರ್.ಸಿ./992248711662 ಇವುಗಳನ್ನು ಅನುಷ್ಠಾನಗೊಳಿಸುವಲ್ಲಿ ಎದುರುದಾರರು ಅಕ್ರಮವೆಸಗಿದ್ದಾರೆಂದು ಅಭಿಪ್ರಾಯಪಟ್ಟಿದ್ದಾರೆ.

ಇ) ಕಾಮಗಾರಿ ಸಂಕೇತ ಆರ್.ಸಿ./992248711660 ಮಸ್ಟರ್ ರೋಲ್ ಸಂಖ್ಯೆ:

| ಅ. ನಂ: | ಕಾಮಗಾರಿ ಸಂಕೇತ ಸಂಖ್ಯೆ: | ಮಸ್ಟರ್ ರೋಲ್ ಸಂಖ್ಯೆ: | ಹಣ |
|---|---|---|---|
| 1 | ಆರ್.ಸಿ./992248711660 | 4860 | 41412 |
| 2 | – " – | 5379 | 41412 |
| 3 | – " – | 7935 | 64544 |
| 4 | ಆರ್.ಸಿ./992248711662 | 6493 | 40194 |
| 5 | – " – | 7810 | 46284 |
| 6 | ಆರ್.ಸಿ./992248711660 | 8689 | 33756 |
| 7 | ಆರ್.ಸಿ./992248711662 | 2541 | 49119 |
| 8 | – " – | 8692 | 52200 |
| 9 | – " – | ಬಿಲ್ ಸಂಖ್ಯೆ:18 | 71855 |
| 10 | – " – | ಬಿಲ್ ಸಂಖ್ಯೆ:578 | 78009 |

ಈ) ಮೇಲಿನ ಪಟ್ಟಿಯ ಕ್ರಮ ಸಂಖ್ಯೆ: 1 ರಿಂದ 5ರಲ್ಲಿ ಎನ್.ಎಂ.ಆರ್. ಬಿಲ್ಲುಗಳನ್ನು ನಗದೀಕರಿಸಲಾಗಿದೆ ಆದರೆ ದಿ: 25.3.2014ರಂದು ವಿಚಾರಣಾ ಸಮಯದಲ್ಲಿ ಈ ಮಾಹಿತಿಯನ್ನು ನೀಡದೆ ಎದುರುದಾರ ನಂ:2 ಮತ್ತು 3 ರವರು ವಂಚಿಸಿದ್ದಾರೆ. ಅದೇ ರೀತಿ ಕ್ರಮ ಸಂಖ್ಯೆ: 6 ರಲ್ಲಿ ದಿ: 15.4.2014ರಂದು ಎನ್.ಎಂ.ಆರ್. ಬಿಲ್ಲನ್ನು ನಗದೀಕರಿಸಲಾಗಿದೆ ಮತ್ತು ಇದೇ ಕಾಮಗಾರಿಗೆ ಸಾಮಗ್ರಿಗಳ ಬಿಲ್ ಸಂ: 2 ರೂ 33584/–, ಬಿಲ್ ಸಂ: 16 ರೂ. 19740/– ಮತ್ತು ಬಿಲ್ ಸಂ: 1 58322/– ಬಿಲ್ ಸಂ: 2541 ರೂ.49119 ಬಿಲ್ಲುಗಳನ್ನು ದಿ: 28.8.2014ರಂದು ನಗದೀಕರಿಸಲಾಗಿದೆ. ಅಲ್ಲದೆ ಕ್ರಮ ಸಂ: 8 ರಿಂದ 10ರ ಬಿಲ್ಲುಗಳನ್ನು ಆ್ಯಂಟಿಸಿಪೇಟೆಡ್ ಬಿಲ್ಲುಗಳೆಂದು (ಎಂ.ಐ.ಎಸ್) ಆರೋಹಿಸಲಾಗಿದೆ.

ಉ) ಒಟ್ಟಾರೆ ಕಾಮಗಾರಿ ಸಂಕೇತ ಆರ್.ಸಿ./992248711660 ಕ್ಕೆ ಒಟ್ಟು 234458/– ಮತ್ತು ಕಾಮಗಾರಿ ಸಂಕೇತ ಆರ್.ಸಿ./992248711662 ಒಟ್ಟು ರೂ. 795416/– ಗಳನ್ನು ಡ್ರಾ ಮಾಡಲಾಗಿದೆ. ಆದರೆ ಈ ಕಛೇರಿಯ ಆದೇಶ ಸಂ: ಓಂಕಾ: ಜಿ.ಪಂ–2: ದೂ: 51/2013–14 ದಿ: 28.3.2014ರ ರೀತ್ಯ ಜಿಲ್ಲಾ/ ರಾಜ್ಯ ಗುಣ

ನಿಯಂತ್ರಕರ ವರದಿ ಪಡೆದ ನಂತರವೇ ಹಣ ಡ್ರಾ ಮಾಡಲು ತಡೆಹಿಡಿಯಲಾಗಿತ್ತು. ಇದನ್ನು ಧಿಕ್ಕರಿಸಿ ಎದುರುದಾರ ನಂ: 2 ಮತ್ತು 3 ರವರು ಬಿಲ್ಲುಗಳನ್ನು ನಗದೀಕರಿಸಿರುವುದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.

ಊ) ಎದುರುದಾರ ನಂ: 2 ಮತ್ತು 3 ರವರು ಈ ಕೆಳಕಂಡ ಅನರ್ಹ ವ್ಯಕ್ತಿಗಳಿಗೆ ಜಾಬ್ ಕಾರ್ಡ್ ನೀಡಿದ್ದಾರೆ.

| ಕ್ರ ಸಂ | ಜಾಬ್ ಕಾರ್ಡ್ ಸಂ | ಅನರ್ಹ ವ್ಯಕ್ತಿಗಳ ಹೆಸರು | ಅನರ್ಹಕ್ಕೆ ಕಾರಣ |
|---|---|---|---|
| 1 | ಕೆ.ಎನ್.25–004–006–001/826 | ನಾಗೇಶ್ ಮತ್ತು ಸೋಮಶೇಖರ್ | ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. |
| 2 | 550 | ಅರೀಫ್ ಉಲ್ಲಾ ಖಾನ್ ಮತ್ತು ರೆಹಮತ್ತ ಉಲ್ಲಾ ಖಾನ್ | ಕೆ. ಹೊಸಹಳ್ಳಿ ಗ್ರಾಮ ವಾಸಿಗಳು |
| 3 | 780 | ಕುಮಾರ್, ನಾಗೇಶ, ಚಂದ್ರ, ರಾಜು | ಬೋಗಸ್ ಹೆಸರುಗಳು |
| 4 | 820 | ಶಿವರಾಜು, ರಂಗಪ್ಪ, ಲಕ್ಷ್ಮಮ್ಮ, ಸಂಗೀತ | ಬೋಗಸ್ ಹೆಸರುಗಳು |
| 5 | 821 | ಮನು ಭಗವತ್ ಯೋಗೇಶ್ | ಬೋಗಸ್ ಹೆಸರುಗಳು |
| 6 | 822 | ಪವನ್ ಪಲ್ಲವಿ ಗೋವಿಂದ | ಬೋಗಸ್ ಹೆಸರುಗಳು |
| 7 | 950 | ಸ್ಫೂರ್ತಿ ಮಧು ತನುಜ | ಬೋಗಸ್ ಹೆಸರುಗಳು |
| 8 | 60 | ನಾರಸಿಗಯ್ಯ | ಬೋಗಸ್ ಹೆಸರುಗಳು |

ಋ) ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಒಂಬಡ್ಸ್‌ಮೆನ್ ರವರು ತಮ್ಮ ಆದೇಶದಲ್ಲಿ ಎದುರುದಾರ ನಂ: 2 ಮತ್ತು 3 ರವರು 2 ಕಾಮಗಾರಿಗಳ ಸಂಬಂಧ ಕ್ರಮವಾಗಿ 234458/– ಮತ್ತು 195416/– ರೂಗಳನ್ನು ಡ್ರಾ ಮಾಡಿರುತ್ತಾರೆ. ಎರಡೂ ಕಾಮಗಾರಿಗಳಲ್ಲಿ ಬೋಗಸ್ ಹೆಸರುಗಳುಳ್ಳ ಜಾಬ್ ಕಾರ್ಡ್‌ಗಳನ್ನು ಎನ್.ಎಂ.ಆರ್.ಗಳಲ್ಲಿ ಬಳಸಿದ್ದಾರೆ. ಆದ್ದರಿಂದ ಒಟ್ಟು 429874/–ರೂಗಳನ್ನು ಈ ಇಬ್ಬರಿಂದ ಸಮ ಪ್ರಮಾಣದಲ್ಲಿ ಅಂದರೆ 214937/– ರೂಗಳನ್ನು ವಸೂಲಿ ಮಾಡಿ

ನರೇಗ ಯೋಜನೆಯ ಲೆಕ್ಕ ಶಿರ್ಷಿಕೆಗೆ ಜಮಾ ಮಾಡಲು ಸೂಕ್ತ ಕ್ರಮ ವಹಿಸುವಂತೆ ಸಿ.ಇ.ಓ., ತುಮಕೂರು ರವರಿಗೆ ಸೂಚಿಸಿದ್ದಾರೆ.

ಎ) ಬೋಗಸ್ ಜಾಬ್ ಕಾರ್ಡ್‌ಗಳನ್ನು ಬಳಸಿಕೊಂಡು ಕಾಮಗಾರಿಗಳ ಎನ್.ಎಂ.ಆರ್.ಗಳಲ್ಲಿ ಹಣ ಡ್ರಾ ಮಾಡಿರುವ ಎದುರುದಾರ ನಂ: 2, 3 ಹಾಗೂ 5ರವರು ಒಟ್ಟು 31668/- ರೂಗಳನ್ನು ಕ್ರಮವಾಗಿ 2:2:1 ಅನುಪಾತದಲ್ಲಿ ಅಂದರೆ ಎದುರುದಾರ ನಂ: 2 ಮತ್ತು 3 ತಲಾ 12668/- ಮತ್ತು ಎದುರುದಾರ ನಂ:5 ರವರಿಂದ 6332/- ರೂಗಳನ್ನು ವಸೂಲಿ ಮಾಡಿ ನರೇಗ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದ್ದಾರೆ.

ಏ) ಈ ಎಲ್ಲಾ ಅಂಶಗಳನ್ನು ಪರಿಗಣಿಸಲಾಗಿ ಎದುರುದಾರ ನಂ: 2, 3 ಹಾಗೂ 5 ರವರು ತಮ್ಮ ಕರ್ತವ್ಯವನ್ನು ದುರುಪಯೋಗ ಪಡಿಸಿಕೊಂಡು ಕಾಮಗಾರಿಗಳಲ್ಲಿ ಸಾಕಷ್ಟು ಅಕ್ರಮ ನಡೆಸಿ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಕಂಡುಬರುತ್ತದೆ.

9) ಈ ಪ್ರಕರಣದಲ್ಲಿ ಅಕ್ರಮ ಕಾಮಗಾರಿ ಮಾಡಿ ಸರ್ಕಾರದ ಹಣ ದುರುಪಯೋಗವಾಗಿದ್ದು ಓಂಬಡ್ಸ್‌ಮೆನ್ ವರದಿಯಿಂದ ಹಾಗೂ ಇತರೆ ದಾಖಲಾತಿಗಳಿಂದ ಕಂಡುಬರುತ್ತದೆ. ಪ್ಯಾರ ನಂ:ಖು & ಎ ರಲ್ಲಿ ನಮೂದಿಸಿದಂತೆ ಎದುರುದಾರ ನಂ: 2, 3 ಮತ್ತು 5 ರವರಿಂದ ದುರುಪಯೋಗವಾದ ಹಣವನ್ನು ಕಾನೂನು ಪ್ರಕಾರ ವಸೂಲಿ ಮಾಡಿಕೊಂಡು ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12 (1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

10) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ

ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 23/11/16

(ನ್ಯಾಯಾಮೂರ್ತಿ ಸುಭಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.